No.MAG(3)/NPP/98/2023-2024

No.MAG(3)/NPP/99/2023-2024





ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು-೧೩೧

ಸಂಪುಟ: ೧೪ ಸಂಚಿಕೆ: ೭ | ಅಕ್ಟೋಬರ್ ೨೦೨೬ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ಪರಾಭವ ಸಂವತ್ಸರ

Volume: 14 Issue: 7 | October 2026 | Pages-8 | Annual Subscription Rs.20/- | ಶ್ರಾವಣ-ಆಶ್ವಯುಜ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ.ಎಸ್.ಎಲ್.ಮಂಜುನಾಥ್**

**ಬಿ.ಎಂ.ಶ್ರೀ. ಪ್ರತಿಷ್ಠಾನ**
ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕ
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷ

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷಕ**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕ**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

## ಸಂಪಾದಕೀಯ

ಅಕ್ಟೋಬರ್ ತಿಂಗಳೆಂದರೆ ಹೆಣ್ಣುಮಕ್ಕಳಿಗೆ, ಮಹಿಳೆಯರಿಗೆ ಹಬ್ಬಗಳ ಸಂಭ್ರಮ. ಮಕ್ಕಳಿಗೆ ಮಧ್ಯವಾರ್ಷಿಕ ಅಥವಾ ದಸರಾ ರಜೆಯ ಸಂಭ್ರಮ. ರಾಷ್ಟ್ರಪಿತನ ಜಯಂತಿಯನ್ನು ಆಚರಿಸಿ ರಜೆ ಪ್ರಾರಂಭಗೊಂಡರೆ ಬೆಳಕಿನ ಹಬ್ಬವನ್ನು ಆಚರಿಸಿದ ನಂತರ ಶಾಲೆಗಳು ಪುನರಾರಂಭಗೊಳ್ಳುತ್ತವೆ. ಈ ಒಂದು ತಿಂಗಳು ಪ್ರವಾಸಿ ತಾಣಗಳು ಪ್ರವಾಸಿಗರಿಂದ ಗಿಜಿಗುಡುತ್ತಿರುತ್ತವೆ. ಅದರಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಪ್ರವಾಸಿಗರ ಆಕರ್ಷಣೆಯ ನಗರ. ಅಕ್ಟೋಬರ್ ತಿಂಗಳಲ್ಲಿ ಬರುವ ದಸರಾ ಮಹೋತ್ಸವವನ್ನು ಭಾರತದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಆಚರಿಸಿದರೂ ಮೈಸೂರಿನಲ್ಲಿ ಆಚರಿಸುವ ದಸರಾ ಮಹೋತ್ಸವವು ಐತಿಹಾಸಿಕವಾಗಿ ಜಗತ್ಪ್ರಸಿದ್ಧವಾದುದು. ಇದು ಧರ್ಮದ ವಿಜಯ, ಸತ್ಯದ ಜಯ ಮತ್ತು ಅಧರ್ಮದ ಅಂತ್ಯವನ್ನು ಪ್ರತಿಬಿಂಬಿಸುವ ಹಬ್ಬವಾಗಿದೆ. ಅತ್ಯಂತ ವೈಭವದಿಂದ ಮೆರೆದ ವಿಜಯನಗರ ಸಾಮ್ರಾಜ್ಯದ ಕಾಲದಿಂದಲೂ ಈ ವಿಶೇಷ ಪರಂಪರೆ ಬೆಳೆದು, ನಂತರ ಮೈಸೂರು ಒಡೆಯರ ಕಾಲದಲ್ಲಿ ಮತ್ತಷ್ಟು ವೈಭವವನ್ನು, ಉತ್ಕೃಷ್ಟತೆಯನ್ನು ಪಡೆದುಕೊಂಡಿತು. ನವರಾತ್ರಿಯ ದಿನಗಳಲ್ಲಿ ಪೂಜೆಗಳು, ಮೆರವಣಿಗೆಗಳು, ಸಂಗೀತ ನೃತ್ಯ ಪ್ರದರ್ಶನಗಳು, ಕ್ರೀಡೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಮುಖ ಆಕರ್ಷಣೆಯಾಗಿರುತ್ತವೆ. ವಿಜಯದಶಮಿಯಂದು ಅಲಂಕೃತ ಆನೆಗಳೊಂದಿಗೆ ನಡೆಯುವ ಜಂಬೂಸವಾರಿ ಇಡೀ ಹಬ್ಬಕ್ಕೆ ವಿಶೇಷ ಮೆರುಗು ನೀಡುತ್ತದೆ. ಈಗ ದಸರಾ ಸಂಭ್ರಮ ಹೆಚ್ಚಿಸಲು ಕರಾವಳಿ ಕಲೆಯಾದ ಕಂಬಳವೂ ಸೇರಿಕೊಂಡಿದೆ. ಒಟ್ಟಾರೆ ದಸರಾ ಮಹೋತ್ಸವ ಕೇವಲ ಧಾರ್ಮಿಕ ಆಚರಣೆಯಲ್ಲ. ಅದು ನಮ್ಮ ಪರಂಪರೆ, ಕಲೆ, ಸಂಸ್ಕೃತಿ, ಸಾಮಾಜಿಕ ಸೌಹಾರ್ದತೆ ಹಾಗೂ ನಮ್ಮ ನಾಡಿನ ಹೆಮ್ಮೆಯನ್ನು ಪ್ರತಿಬಿಂಬಿಸುವ ಮಹೋತ್ಸವವಾಗಿದೆ. ಬದಲಾಗುತ್ತಿರುವ ಕಾಲಘಟ್ಟದಲ್ಲಿ ನಮ್ಮ ಸಾಂಸ್ಕೃತಿಕ ಬೇರುಗಳನ್ನು, ಪರಂಪರೆಯನ್ನು ನೆನಪಿಸುವ ಹಬ್ಬ ಇದಾಗಿದೆ.

**ಡಾ. ಎಸ್.ಎಲ್. ಮಂಜುನಾಥ್**

## ಕವನ ವಾಚನ ಸ್ಪರ್ಧೆ

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ **ಶ್ರೀ ಕೆ. ಮೋಹನ್‌ದೇವ್ ಆಳ್ವ** ಮತ್ತು **ಡಾ. ಎಂ.ಕೆ. ಶೈಲಜಾ ಆಳ್ವ** ಅವರು ಸ್ಥಾಪಿಸಿರುವ **ರಾಷ್ಟ್ರಕವಿ ಶ್ರೀ ಮಂಜೇಶ್ವರ ಗೋವಿಂದ ಪೈ ದತ್ತಿ, ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ದತ್ತಿ, ರೆವರೆಂಡ್ ಶ್ರೀ ಚನ್ನಪ್ಪ ದಾನಿ ಯೆಲ್ಲಪ್ಪ ಉತ್ತಂಗಿ ದತ್ತಿ ಹಾಗೂ ಶ್ರೀ ಕೃಷ್ಣಮೂರ್ತಿ ಪುರಾಣಿಕ ದತ್ತಿಗಳ** ಆಶ್ರಯದಲ್ಲಿ 10 ರಿಂದ 16 ವರ್ಷ ವಯಸ್ಸಿನವರಿಗೆ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಕವನ ವಾಚನ ಸ್ಪರ್ಧೆಯನ್ನು ಏರ್ಪಡಿಸಿದೆ. ಸ್ಪರ್ಧಿಗಳು ಗೋವಿಂದ ಪೈ, ದ.ರಾ. ಬೇಂದ್ರೆ, ಕೃಷ್ಣಮೂರ್ತಿ ಪುರಾಣಿಕರ ಯಾವುದಾದರೂ ಒಂದು ಕವನವನ್ನು ವಾಚನ ಮಾಡಬೇಕು.

ಸ್ಪರ್ಧೆಯು **31 ಅಕ್ಟೋಬರ್ 2026 ಶನಿವಾರ** 10.30 ಗಂಟೆಯಿಂದ ನಡೆಯಲಿದ್ದು, ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಯಸುವವರು **ಅಕ್ಟೋಬರ್ 28 ಬುಧವಾರ ಸಂಜೆ 5–00 ಗಂಟೆಯ** ಒಳಗೆ **ಬಿ.ಎಂ.ಶ್ರೀ. ಪ್ರತಿಷ್ಠಾನದ ಕಛೇರಿ, 3ನೇ ಮುಖ್ಯರಸ್ತೆ, ಬಿ.ಎಂ.ಶ್ರೀ.ಪ್ರತಿಷ್ಠಾನದ ರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–560004** ಇಲ್ಲಿ ಹೆಸರನ್ನು ವಯಸ್ಸಿನ ಆಧಾರ ಪತ್ರದೊಂದಿಗೆ ಖುದ್ದಾಗಿ ನೋಂದಾಯಿಸಿಕೊಳ್ಳಬೇಕು. ವಿಜೇತರಾದವರಿಗೆ ಪ್ರತ್ಯೇಕವಾಗಿ (10 ರಿಂದ 16 ವಯಸ್ಸಿನವರಿಗೆ ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ) **ಪ್ರಥಮ ಬಹುಮಾನ ರೂ. 4,000/–, ದ್ವಿತೀಯ ಬಹುಮಾನ ರೂ.3,000/** ಮತ್ತು **ತೃತೀಯ ಬಹುಮಾನ– 2,000/–ರೂಪಾಯಿಗಳನ್ನು** ನಗದು ರೂಪದಲ್ಲಿ ಪ್ರಮಾಣಪತ್ರಗಳೊಂದಿಗೆ ನೀಡಲಾಗುವುದು.

**ಅರ್ಜಿಗಳು ಪ್ರತಿಷ್ಠಾನದ ಕಛೇರಿಯಲ್ಲಿ ದೊರೆಯುತ್ತವೆ.**
**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 9972812127**

# ಸೆಪ್ಟಂಬರ್ ಮಾಹೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ನಡೆದ ಕಾರ್ಯಕ್ರಮಗಳ ವರದಿ

## ೧೮.೯.೨೦೨೬ ಶುಕ್ರವಾರ ಸಂಜೆ–೫.೦೦ ಗಂಟೆಗೆ

ವಿಷಯ: **ಮಡಿವಾಳ ಮಾಚಿದೇವ**

ವಿಷಯ ಮಂಡನೆ: **ಪ್ರೊ. ಟಿ.ಎಸ್. ನಾಗರಾಜಶೆಟ್ಟಿ,** ನಿವೃತ್ತ ಕನ್ನಡ ಪ್ರಾಧ್ಯಾಪಕರು, ಮಕ್ಕಳ ಸಾಹಿತಿ

ಅಧ್ಯಕ್ಷತೆ : **ಡಾ. ಬೈರಮಂಗಲ ರಾಮೇಗೌಡ**

"೧೨ನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಪ್ರತಿಸಂಸ್ಕೃತಿಯೊಂದು ನಿರ್ಮಾಣವಾಯಿತು. ಹಿಂದೆ ಅಸ್ಪೃಶ್ಯತೆ ಇದ್ದಂತಹ, ಜಾತಿಭೇದಗಳಿದ್ದಂತಹ, ಕೆಳವರ್ಗದವರನ್ನು ತುಳಿದಂತಹ, ಮಹಿಳೆಯರನ್ನು ಕಡೆಗಣಿಸಿದ್ದಂತಹ ಸಂದರ್ಭದಲ್ಲಿ ವಚನ ಸಾಹಿತ್ಯ ಸೃಷ್ಟಿಯಾಯಿತು. ಯಾವ ಸಾಹಿತ್ಯ ಜನರೊಂದಿಗೆ ಬೆಳೆಯುತ್ತದೋ ಆ ಸಾಹಿತ್ಯ ಆದರ್ಶಪ್ರಾಯ ಸಾಹಿತ್ಯವಾಗುತ್ತದೆ. ಅಂತಹ ಸಾಹಿತ್ಯ ಶಾಶ್ವತ ಸಾಹಿತ್ಯವಾಗಿ ಉಳಿಯುತ್ತದೆ. ಹಾಗೇ ಆಧುನಿಕ ಸಂದರ್ಭದಲ್ಲಿ ನವೋದಯ ಸಾಹಿತ್ಯವೂ ಜನರೊಂದಿಗೆ ಬೆಳೆದ ಸಾಹಿತ್ಯ. ಹೀಗಾಗಿ ಅದೂ ಕೂಡ ಆದರ್ಶಪ್ರಾಯ ಸಾಹಿತ್ಯವಾಗಿದೆ. ಹಾಗೇ ವಚನ ಸಾಹಿತ್ಯ ಇಂದಿಗೂ ನಮ್ಮ ನಡುವೆ ಆದರ್ಶಸಾಹಿತ್ಯವಾಗಿ ಉಳಿದಿದೆ." ಎಂದು ಪ್ರೊ. ಟಿ.ಎಸ್. ನಾಗರಾಜಶೆಟ್ಟರು ಮಡಿವಾಳ ಮಾಚಿದೇವನನ್ನು ಕುರಿತು ಉಪನ್ಯಾಸ ಮಾಡುತ್ತಾ ಹೇಳಿದರು. ಮುಂದುವರಿಸುತ್ತಾ "ವಚನಕಾರರು ಜನರನ್ನು ಅಧ್ಯಯನ ಮಾಡಿದವರು. ಇವರಷ್ಟು ಚೆನ್ನಾಗಿ ಅಧ್ಯಯನ ಮಾಡಿದವರು ಬೇರಾರು ಇಲ್ಲ. ವಚನ ಸಾಹಿತ್ಯವನ್ನು ಶರಣ ಸಾಹಿತ್ಯ, ವಚನ ಚಳುವಳಿ, ಶಿವಶರಣರ ಚಳುವಳಿ, ಶಿವ ಸಂಸ್ಕೃತಿ ಚಳುವಳಿ ಎಂದು ಕರೆಯುತ್ತಾರೆ. ವಚನ ಸಾಹಿತ್ಯದಲ್ಲಿ ವೈಚಾರಿಕತೆ ಎನ್ನುವುದೇ ಪ್ರಧಾನವಾದುದು. ವಚನಕಾರರು ಎಂದಕೂಡಲೇ ನೆನಪಾಗುವುದು ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ. ಆದರೆ ಇವರೊಟ್ಟಿಗೆ ನಾವು ಮಡಿವಾಳ ಮಾಚಿದೇವನನ್ನು ಸೇರಿಸಿ ಹೇಳಬೇಕಾಗುತ್ತದೆ. ಏಕೆಂದರೆ ಈತನೂ ಕೂಡ ತನ್ನ ವಚನಗಳನ್ನು ಅವರಷ್ಟೇ ಪರಿಣಾಮಕಾರಿಯಾಗಿ ರಚನೆ ಮಾಡಿದ್ದಾನೆ. ವಿಜಾಪುರ ಜಿಲ್ಲೆ, ಸಿಂಧಗಿ ತಾಲ್ಲೂಕಿನ ಹಿಪ್ಪರಗಿ ಈತನ ಊರು. ಆ ಊರಿನ ಕಲ್ಲಿನಾಥದೇವರು ಇವನ ಆರಾಧ್ಯ ದೈವ. ಹೀಗಾಗಿ ಇವನ ವಚನಗಳ ಅಂಕಿತ ಕಲ್ಲಿನಾಥದೇವ. ಮಡಿವಾಳಿಕೆ ಇವನ ಕಸುಬು. ಅಂದರೆ ಊರಿನವರೆಲ್ಲರ ಬಟ್ಟೆ ಒಗೆಯುವುದು ಇವನ ಕಾಯಕ. ಬಸವಣ್ಣ ಎಲ್ಲಾ ಜನಾಂಗದವರನ್ನು ಕರೆತಂದು ಶರಣರನ್ನಾಗಿ ಮಾಡಿದ. ಬಸವಣ್ಣನಿಗೆ ಇವನು ಆಪ್ತನಾದ ನಂತರದಲ್ಲಿ ಶಿವಭಕ್ತರ ಬಟ್ಟೆಗಳನ್ನು ಮಾತ್ರ ಒಗೆಯುತ್ತೇನೆಂದು ಧೈರ್ಯದಿಂದ ನಿರ್ಧರಿಸಿ ಹೇಳಿದ. ಈತನ ೩೬೦ ವಚನಗಳು ನಮಗೆ ಲಭ್ಯವಾಗಿವೆ. ನಿರ್ದಾಕ್ಷಿಣ್ಯವಾಗಿ ಖಂಡಿಸುವ ಸ್ವಭಾವ ಇವನದು. ಒಟ್ಟು ನಮಗೆ ೨೧೦ ವಚನಕಾರರು ಕಾಣಿಸಿಕೊಂಡಿದ್ದಾರೆ. ಅದರಲ್ಲಿ ೯ ದಲಿತ ವಚನಕಾರರಲ್ಲಿ ಮಡಿವಾಳ ಮಾಚಿದೇವನೂ ಒಬ್ಬ. ಡಾಂಭಿಕ ಭಕ್ತಿ, ಕರ್ಮನಿಷ್ಠ ವ್ಯಕ್ತಿ, ಕ್ಷುದ್ರದೈವ, ಸ್ಥಾವರ ಲಿಂಗಪೂಜೆ ಹಾಗೂ ಸ್ಥಾವರ ವ್ಯವಸ್ಥೆಗಳನ್ನು ನಿಷ್ಠುರವಾಗಿ ವಿರೋಧಿಸುವ ಈತನು ವೀರಶೈವ ತತ್ವ, ಆಚರಣೆಗಳನ್ನು ಸಮರ್ಥವಾಗಿ ವಚನಗಳಲ್ಲಿ ಪ್ರತಿಪಾದಿಸಿದ್ದಾನೆ. ಬಸವಣ್ಣನವರನ್ನು ಮಹಿಮಾ ಪುರುಷನೆಂದು ಭಕ್ತಿ, ವಿಶ್ವಾಸಗಳಿಂದ ಅಧಿಕವಾಗಿ ಸ್ತುತಿಸಿದ್ದಾನೆ. ಬಸವಣ್ಣನ ನೆನೆದೆನ್ನ ತನು ಬಯಲಾಯಿತ್ತು "ಬಸವಣ್ಣನ ನೆನೆದೆನ್ನ ಮನ ಬಯಲಾಯಿತ್ತು, ಬಸವಣ್ಣನ ನೆನೆದೆನ್ನ ಭಾವ ಬಯಲಾಯಿತ್ತು" ಎಂದು ಒಂದು ವಚನದಲ್ಲಿ ಬರೆದರೆ, ಮತ್ತೊಂದು ವಚನದಲ್ಲಿ "ಬಸವಣ್ಣನ ನೆನೆವುದೆ ಷೋಡಶೋಪಚಾರ, ಬಸವಣ್ಣನ ನೆನೆವುದೆ ಪರಮತತ್ವ, ಬಸವಣ್ಣನ ನೆನೆವುದೆ ಮಹಾನುಭಾವ, ಕಲಿದೇವಾ, ನಿಮ್ಮ ಶರಣ ಬಸವಣ್ಣನ ನೆನೆದು, ಸಮಸ್ತ ಗಣಂಗಳೆಲ್ಲರೂ ಅತಿಶುದ್ಧರಾದರಯ್ಯ" ಎಂದಿದ್ದಾನೆ. ಹೀಗೆ ಸುದೀರ್ಘವಾಗಿ ಮಡಿವಾಳ ಮಾಚಿದೇವನ ಸಾಹಿತ್ಯ, ಬರವಣಿಗೆಯನ್ನು ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡರು ಮಾತನಾಡುತ್ತ "ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ೩೨ ಸಾಂಸ್ಕೃತಿಕ ನಾಯಕರ ಜಯಂತ್ಯುತ್ಸವಗಳನ್ನು ನಡೆಸಿಕೊಂಡು ಬರುತ್ತಿದೆ. ಒಂದೊಂದು ಸಮುದಾಯದ ಒಬ್ಬೊಬ್ಬರನ್ನು ಆಯ್ಕೆಮಾಡಿಕೊಂಡು ಜನರನ್ನು ಓಲೈಸುವ ನಿಟ್ಟಿನಲ್ಲಿ ಎಲ್ಲ ಸರ್ಕಾರಗಳೂ ಜಯಂತ್ಯುತ್ಸವಗಳನ್ನು ಆಚರಿಸಿಕೊಂಡು ಬರುತ್ತಿವೆ. ೧೨ನೇ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ, ಅಲ್ಲಮಪ್ರಭುವಿನ ಒತ್ತಾಸೆಯೊಂದಿಗೆ ಒಂದು ಮಹಾಕ್ರಾಂತಿ ನಡೆಯಿತು. ಆ ಮಹಾಕ್ರಾಂತಿ ಧರ್ಮಕ್ಕೆ ಸಂಬಂಧಪಟ್ಟದ್ದಲ್ಲ, ರಾಜಕೀಯಕ್ಕೆ ಸಂಬಂಧಪಟ್ಟದ್ದಲ್ಲ, ಸಾಹಿತ್ಯಕ್ಕೆ ಸಂಬಂಧಪಟ್ಟದ್ದಲ್ಲ, ಅದು ಸಂಸ್ಕೃತಿಗೆ ಸಂಬಂಧಪಟ್ಟದ್ದು.






ಅದು ಏಕಕಾಲಕ್ಕೆ ನಡೆದ ಸಾಂಸ್ಕೃತಿಕ ಕ್ರಾಂತಿಯೂ ಹೌದು, ಧಾರ್ಮಿಕ ಕ್ರಾಂತಿಯೂ ಹೌದು, ಸಾಹಿತ್ಯಕ ಕ್ರಾಂತಿಯೂ ಹೌದು, ರಾಜಕೀಯ ಕ್ರಾಂತಿಯೂ ಹೌದು. ಪ್ರೊ. ಟಿ.ಎಸ್. ನಾಗರಾಜಶೆಟ್ಟರು ನಮ್ಮ ಮನವಿಯನ್ನು ಗೌರವಿಸಿ ದೂರದ ಊರು ತಿಪಟೂರಿನಿಂದ ಬಂದು ಮಡಿವಾಳ ಮಾಚಿದೇವನ ಆಶಯಗಳನ್ನು ಕುರಿತು ತುಂಬಾ ಚೆನ್ನಾಗಿ ತಮ್ಮ ಉಪನ್ಯಾಸದ ಮೂಲಕ ಪರಿಚಯ ಮಾಡಿಕೊಟ್ಟಿದ್ದಾರೆ" ಎಂದು ಹೇಳಿ ಧನ್ಯವಾದಗಳನ್ನು ತಿಳಿಸಿದರು.

ಕಾರ್ಯಕ್ರಮದ ಮೊದಲಿಗೆ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಗುರುಪ್ರಸಾದ್ ಅವರು ಶಂಬಾ ಜೋಶಿ ದತ್ತಿಯ ಹಿಂದಿನ ಹಿನ್ನೆಲೆಯನ್ನು ಕುರಿತು ಪರಿಚಯಿಸುತ್ತಾ, ಇದು ನಮ್ಮಲ್ಲಿ ಪ್ರಾರಂಭವಾದದ್ದು ೧೯೯೮ ರಲ್ಲಿ. ಈ ದತ್ತಿಯಡಿಯಲ್ಲಿ ೨೯ನೇ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದೇವೆ. ೧೯೮೦ರಲ್ಲಿ ಶಂಬಾ ಅವರಿಗೆ ೮೪ ವರ್ಷ. ಆಗ ಬೆಂಗಳೂರಿನಲ್ಲಿ ಅವರಿಗೊಂದು ಅಭಿನಂದನಾ ಸಮಾರಂಭವನ್ನು ಏರ್ಪಡಿಸುತ್ತಾರೆ. ಸಮಾರಂಭವೆಲ್ಲಾ ತುಂಬಾ ಚೆನ್ನಾಗಿ ನಡೆಯುತ್ತದೆ. ನಂತರ ಅಭಿನಂದನಾ ಸಮಿತಿಯಲ್ಲಿ ೭೦೦೦/– ರೂಪಾಯಿ ಉಳಿದುಕೊಳ್ಳುತ್ತದೆ. ಅದನ್ನೇ ಬಿ.ಎಂ.ಶ್ರೀ.ಯಲ್ಲಿ ಶಂಬಾ ಜೋಶಿ ಅವರ ಹೆಸರಿನಲ್ಲಿ ಮೂಲಧನವನ್ನಾಗಿರಿಸಿ ದತ್ತಿ ಉಪನ್ಯಾಸ ನಡೆಸಲು ಸೂಚಿಸಲಾಗುತ್ತದೆ. ನಂತರ ಧಾರವಾಡದಲ್ಲಿದ್ದ ಮಾನವಧರ್ಮ ಪ್ರತಿಷ್ಠಾನದವರು ೨೦೦೦೦/– ರೂಗಳನ್ನು ಕೊಡುತ್ತಾರೆ. ಶಂಬಾ ಜೋಶಿ ಅವರ ಪುತ್ರ ಮಧುಸೂದನ ಜೋಷಿ ಅವರು ೩೦೦೦/– ರೂ.ಗಳನ್ನು, ಮಗಳು ೧೦೦೦೦/– ರೂ.ಗಳನ್ನು ಕೊಡುತ್ತಾರೆ. ೨೦೨೦ ರಲ್ಲಿ ಮಾನವಧರ್ಮ ಪ್ರತಿಷ್ಠಾನದವರು ಮತ್ತೆ ೨೦೦೦೦/– ರೂ.ಗಳನ್ನು ಕೊಡುತ್ತಾರೆ. ಒಟ್ಟು ೬೦೦೦೦/– ರೂ.ಗಳಲ್ಲಿ ಈ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆದುಕೊಂಡು ಬರುತ್ತಿದೆ ಎಂದು ತಿಳಿಸಿದರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಎಲ್ಲರನ್ನೂ ಸ್ವಾಗತಿಸಿ ಪ್ರೊ. ಟಿ.ಎಸ್. ನಾಗರಾಜಶೆಟ್ಟರು ತಿಪಟೂರಿನ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಕೆಲಸ ಮಾಡಿದವರು. ವಿದ್ಯಾರ್ಥಿಗಳ ನೆಚ್ಚಿನ ಗುರುಗಳಾಗಿದ್ದವರು. ಬಾಲ್ಯದಿಂದಲೇ ಮಕ್ಕಳ ಸಾಹಿತ್ಯವನ್ನು ಬರೆಯಲು ಪ್ರಾರಂಭಿಸಿದವರು. ಇಂದು ಮಕ್ಕಳ ಸಾಹಿತಿಯಾಗಿ ಜನಪ್ರಿಯರಾಗಿದ್ದಾರೆಂದು ಹೇಳಿದರು. ಕಾರ್ಯಕ್ರಮದ ಕೊನೆಯಲ್ಲಿ ನೂತನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರುವ ಡಾ. ರಾಜಶ್ರೀ ಕಿಶೋರ್ ವಂದನಾರ್ಪಣೆಯ ಮೂಲಕ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

## ಸಂಸ್ಥಾಪಕರ ದಿನಾಚರಣೆ
## ೨೧.೯.೨೦೨೬, ಸೋಮವಾರ ಬೆಳಗ್ಗೆ ೧೦.೩೦
## ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ.ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ ಪ್ರದಾನ

ಪುರಸ್ಕಾರ ಪ್ರದಾನ: **ಡಾ. ಪುರುಷೋತ್ತಮ ಬಿಳಿಮಲೆ**

ಪುರಸ್ಕಾರ ಪಡೆದವರು: **ಡಾ. ಕೃಷ್ಣಮೂರ್ತಿ ಹನೂರು**

ಮುಖ್ಯ ಅತಿಥಿ: **ಡಾ. ಎಸ್.ಆರ್. ವಿಜಯಶಂಕರ**

ಅಧ್ಯಕ್ಷತೆ: **ಡಾ. ಬೈರಮಂಗಲ ರಾಮೇಗೌಡ**

ಸಹಕಾರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಸಂಸ್ಥಾಪಕರ ದಿನಾಚರಣೆಯಂದು ಸಾರಸ್ವತ ಲೋಕಕ್ಕೆ ಈಗಾಗಲೇ ತಮ್ಮ ಕಾದಂಬರಿ, ಕಥಾಸಂಕಲನ, ಜಾನಪದ ಅಧ್ಯಯನದ ಮೂಲಕ ೫೩ ಅಮೂಲ್ಯ ಕೃತಿಗಳನ್ನು ಕೊಟ್ಟಿರುವ ಡಾ.ಕೃಷ್ಣಮೂರ್ತಿ ಹನೂರರನ್ನು ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ ಪ್ರದಾನ ಮಾಡಿ ಗೌರವಿಸಲಾಯಿತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಸಾಹಿತ್ಯ ಪುರಸ್ಕಾರ ಪ್ರದಾನ ಮಾಡಿ "ಹನೂರರೊಂದಿಗೆ ೪೫ ವರ್ಷಗಳ ಒಡನಾಟವಿದೆ. ಇವರನ್ನು ಈ ಪುರಸ್ಕಾರಕ್ಕೆ ಆಯ್ಕೆ ಮಾಡಿರುವುದು ಅರ್ಹವಾಗಿದೆ. ಪ್ರತಿಷ್ಠಾನದ ಅಧ್ಯಕ್ಷರನ್ನು ಹಾಗೂ ಇದರ ಹಿಂದೆ ಕೆಲಸ ಮಾಡಿರುವರೆಲ್ಲರನ್ನೂ ಅಭಿನಂದಿಸುತ್ತೇನೆ.





೧೯೮೮ ರ ಜಾನಪದ ಕಾರ್ಯಾಗಾರದಲ್ಲಿ, ನಂತರ ವಿಶ್ವಕೋಶ ಸಿದ್ಧತೆ ಮಾಡುವಾಗ ಮುಂತಾದ ಸಂದರ್ಭಗಳಲ್ಲಿ ನಾವು ಜೊತೆಗಿದ್ದೆವು. ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಮಹತ್ವದ ಕೃತಿಗಳನ್ನು ಕೊಟ್ಟಿರುವ ಹನೂರು ಅವರಿಗಿರುವ ದೊಡ್ಡ ಗುಣವೆಂದರೆ ಆಯ್ದ ವಿಷಯಗಳಲ್ಲಿ ಅವರಿಗಿರುವ ತಲ್ಲೀನತೆ ಮತ್ತು ಬರಹಗಳಲ್ಲಿನ ತೀವ್ರತೆ. ಇಂಥವರ ಸಂಖ್ಯೆ ಹೆಚ್ಚಿಗೆ ಇಲ್ಲ. ಕಿ.ರಂ.ನಾಗರಾಜರನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. ಭಾಷೆಯ ಬಗ್ಗೆ ಆತ್ಮವಿಶ್ವಾಸ ಮುಖ್ಯ. ಹೀಗೆ ಸಾಹಿತಿಗಳ ಕೊಡುಗೆಗಳಿಂದ ಕನ್ನಡ ಸಾಹಿತ್ಯ ಜಗತ್ತು ಶ್ರೀಮಂತವಾಗಿದೆ. ಈ ಭವ್ಯ ಪರಂಪರೆಯನ್ನು ಮರೆಯಬಾರದೆಂದೇ ವಿಧಾನಸೌಧ ಹಾಗೂ ವಿಕಾಸಸೌಧದ ಪ್ರಾಂಗಣದಲ್ಲಿ ಅಳಿಸಲಾಗದ ರೀತಿಯಲ್ಲಿ ಕನ್ನಡ ಮಾತುಗಳನ್ನು ಕೊರೆಸಿ ಸಾಹಿತಿಗಳ ಘೋಷವಾಕ್ಯಗಳನ್ನು ತೂಗುಹಾಕಲಾಗುತ್ತಿದೆ. ಈ ಕಾರ್ಯದಲ್ಲಿ ಡಾ. ಬೈರಮಂಗಲ ರಾಮೇಗೌಡರು ಪೂರ್ಣ ಸಹಕಾರವನ್ನು ನೀಡಿದ್ದಾರೆ. ಅದು ನಮ್ಮ ಲೇಖಕರ 'ಕನ್ನಡ ಲೋಕ'ವಾಗಿ ಒಂದು ತಿಂಗಳೊಳಗೆ ವೀಕ್ಷಣೆಗೆ ಸಜ್ಜಾಗಲಿದೆ" ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಹಾಗೂ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿದ್ದ ಖ್ಯಾತ ವಿಮರ್ಶಕ ಎಸ್.ಆರ್. ವಿಜಯಶಂಕರ್ ಅವರು ಅಭಿನಂದನಾ ನುಡಿಗಳನ್ನಾಡುತ್ತಾ "ಹನೂರರನ್ನು ಸಾಹಿತ್ಯ ಪುರುಷ ಎಂದು ಕರೆಯಬಹುದು. ಇದನ್ನು ಇಂಗ್ಲಿಷಿನ ಲಿಟರರಿ ಫಿಗರ್ ಎಂಬ ಪದಕ್ಕೆ ಸಂವಾದಿಯಾಗಿಸಬಹುದು. ಇವರು ಸೃಜನಶೀಲತೆಗೆ ಮಾತ್ರವಲ್ಲ, ಶಾಸ್ತ್ರ ವಿಷಯ, ಜಾನಪದ ಹೀಗೆ ಎಲ್ಲಾ ಪ್ರಕಾರಗಳಿಗೂ ಸಲ್ಲುವವರು. ಕನ್ನಡ ಸಾಹಿತ್ಯ ಪರಂಪರೆಯನ್ನು ಅರಗಿಸಿಕೊಂಡು ಕುಮಾರವ್ಯಾಸ ಭಾರತವನ್ನು ಇಂಗ್ಲಿಷಿಗೆ ಅನುವಾದಿಸುವ ವೇಳೆ ಬಂದ ಸಂದೇಹಗಳ ಪರಿಹಾರಕ್ಕೆ ಇವರನ್ನೇ ಸಂಪರ್ಕಿಸುತ್ತಿದ್ದೆ. ಇವರ ಭಾವತಲ್ಲೀನತೆಗೆ ಸೃಜನಶೀಲ ವ್ಯಕ್ತಿತ್ವವೇ ಕಾರಣ. ಅಂತೆಯೇ ಇವರ ಹೋಲಿಕೆಗಳು ಮತ್ತು ಪದಪ್ರಯೋಗಗಳು ಬಹಳಷ್ಟು ಇವೆ. ಕುವೆಂಪು ಅವರು ಪಂಪನನ್ನು ಪಂಡಿತರ ಕವಿಯೆಂದು, ಕುಮಾರವ್ಯಾಸನನ್ನು ಪಾಮರರ ಕವಿ ಎಂದು ಹೇಳಿದ್ದರೆ, ಹನೂರರು ಅರಮನೆ ಕವಿ, ಗುಡಿಸಿಲ ಕವಿ ಎಂದು ಕ್ರಮವಾಗಿ ಟಂಕಿಸುತ್ತಾರೆ" ಎಂದು ಹನೂರರ ಬರವಣಿಗೆ ವೈಶಿಷ್ಟ್ಯಗಳನ್ನು ಪರಿಚಯಿಸಿದರು.

ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ಕೃಷ್ಣಮೂರ್ತಿ ಹನೂರರು ಮಾತನಾಡುತ್ತಾ, "ಈ ಸಭಾಂಗಣದ ಸುತ್ತಲೂ ನಮ್ಮ ತಲೆಮಾರಿನ ಹಿರಿಯರು ಭಾವಚಿತ್ರಗಳ ರೂಪದಲ್ಲಿ ಇದ್ದಾರೆ. ಈ ಮಹನೀಯರ ಪಾದದಡಿಯಲ್ಲಿ ಸಾಹಿತ್ಯ ಪುರಸ್ಕಾರವನ್ನು ಸ್ವೀಕರಿಸಿರುವುದು ಅತ್ಯಂತ ಸಂತೋಷ ತಂದಿದೆ. ನಾನು ಓದಿದ್ದು ಅಕಸ್ಮಾತ್, ನಾನು ಬರೆದದ್ದು ಅಕಸ್ಮಾತ್, ನಾನು ಜಾನಪದ ವಿದ್ವಾಂಸ ಎಂದು ಎಲ್ಲರೂ ಹೇಳ್ತಿದ್ದಾರೆ. ಅದು ಕೂಡ ಅಕಸ್ಮಾತ್. ಓದುವಾಗ ಮೇಷ್ಟ್ರು ಚಿದಾನಂದಮೂರ್ತಿಗಳು ಶಾಸನಗಳನ್ನು, ಮಹಾಸತಿ ಕಲ್ಲುಗಳನ್ನು, ವೀರಗಲ್ಲುಗಳನ್ನು ತಲೆಯಲ್ಲಿ ನೆಟ್ಟಿದ್ದರು. ಕೆಲಸದ ನಿಮಿತ್ತ ಚಳ್ಳಕೆರೆಗೆ ಹೋದಾಗ ಅಲ್ಲಿದ್ದ ಬೆಳಗೆರೆ ಕೃಷ್ಣಶಾಸ್ತ್ರಿಗಳನ್ನು ಭೇಟಿಯಾದೆ. ಅವರು ನನಗೆ ಅಲ್ಲಿನ ಸಿರಿಯಜ್ಜಿಯನ್ನು ಪರಿಚಯಿಸಿದರು. ಸಾಹಿತ್ಯ ವಲಯಕ್ಕಿಂತ ದೊಡ್ಡದು ತಾನು ಕಂಡರಿಸಿದ ಬಯಲುಸೀಮೆಯ ಜಾನಪದ ಜಗತ್ತು. ಸಿರಿಯಜ್ಜಿ ತಾನು ಬೆಳಗಿನ ತನಕ ಜನಪದ ಗೀತೆಗಳನ್ನು ಹಾಡುವೆ ಎಂದು ಉತ್ಸಾಹ ತೋರಿದ್ದು ನನ್ನಲ್ಲಿ ಅಚ್ಚರಿ ಮೂಡಿಸಿತು. ಬೆಳಗೆರೆ ಕೃಷ್ಣಶಾಸ್ತ್ರಿಗಳಿದ್ದ ಗುಡಿಸಿಲಿಗೆ ಸಿರಿಯಜ್ಜಿ




ಪ್ರತಿ ಶನಿವಾರ, ಭಾನುವಾರ ಬಂದು ಹಾಡುತ್ತಿದ್ದರು. ನಾನು ಬರೆದುಕೊಳ್ಳುತ್ತಿದ್ದೆ. ಈ ಕೆಲಸ ನಿರಂತರವಾಗಿ ಮೂರು ವರ್ಷ ಆಯ್ತು. ಸರ್ಕಾರವೂ ಗುರುತಿಸಿತು. ನಂತರ ಸಿರಿಯಜ್ಜಿಗೆ ಎಲ್ಲಾ ರೀತಿಯ ಪ್ರಶಸ್ತಿಗಳು ಬಂದವು. ಲೋಕದ ಪಥ್ಯ ಇದೆಯಲ್ಲ ಅದು ಬದುಕಿನ ಪಥ್ಯ. **ಸಾವಿರದ ಸಿರಿ ಬೆಳಗು** ಪುಸ್ತಕ ಬಿಡುಗಡೆಗೆ ಎಂ.ಪಿ. ಪ್ರಕಾಶ್ ಬಂದಿದ್ದರು. ಕಾರ್ಯಕ್ರಮ ಮುಗಿದ ನಂತರ ಸಿರಿಯಜ್ಜಿಯನ್ನು ಮಾತನಾಡಿಸಿದರು. ಆಗ ಸಿರಿಯಜ್ಜಿ 'ಮಣ್ಣ ಹಣತೆ, ಸಣ್ಣ ಬತ್ತಿ, ಮಿಳ್ಳೆ ಎಣ್ಣೆ ನನ್ನ ಗುಡಿಸಲ ಜ್ಯೋತಿಯೇ' ಎಂದು ಹಾಡಿ ಎಂ.ಪಿ. ಪ್ರಕಾಶ್ ಅವರನ್ನು ಬೆರಗುಗೊಳಿಸಿದಳು. ಅವರೆಲ್ಲರ ನೆರವಿನಿಂದ ನಾನೊಂದಷ್ಟು ಜಾನಪದಕ್ಕೆ ಸಂಬಂಧಪಟ್ಟಂತಹ ಕೆಲಸ ಮಾಡಿರಬಹುದೇ ಹೊರತು, ನಾನಾಗಿಯೇ ಆಯ್ಕೆ ಮಾಡಿಕೊಂಡದ್ದೇನಲ್ಲ. ನನಗೆ ಪಾಠ ಮಾಡಿದ ಎಲ್ಲಾ ಗುರುಗಳ ಹಾರೈಕೆ ಎಲ್ಲರಿಗಿಂತ ನನಗೆ ಜಾಸ್ತಿಯಾಗೇ ಇದೆ ಎನಿಸುತ್ತೆ. ಕಾರಣ ನನಗೆ ಪಾಠ ಮಾಡಿದ ಗುರುಗಳ ಹೆಸರಿನಲ್ಲಿರುವ ಪ್ರಶಸ್ತಿಗಳು ಬಂದಿವೆ. ಹಾಗೇ ಇವತ್ತು ಬಿ.ಎಂ.ಶ್ರೀ. ಪ್ರತಿಷ್ಠಾನದ ಸಂಸ್ಥಾಪಕರೂ, ನನಗೆ ಛಂದಸ್ಸು ಕಲಿಸಿದ ಗುರುಗಳೂ ಆಗಿರುವ ಎಂ.ವಿ.ಸೀ. ಅವರ ಹೆಸರಿನ ಪ್ರಶಸ್ತಿ ಬಂದಿರುವುದು ಅದು ಅವರ ಹಾರೈಕೆಯೇ ಹೊರತು ಬೇರೇನಲ್ಲ"ವೆಂದು ಹೇಳಿದರು. ಅಧ್ಯಕ್ಷ ಭಾಷಣದಲ್ಲಿ ಡಾ. ಬೈರಮಂಗಲ ರಾಮೇಗೌಡರು ಎಂ.ವಿ.ಸೀತಾರಾಮಯ್ಯ ಅವರ ಮಕ್ಕಳ ಸಹಕಾರವನ್ನು ಉಲ್ಲೇಖಿಸುತ್ತಾ, ಹನೂರರಿಗೆ ಇದು ಯೋಗ್ಯ ಪ್ರಶಸ್ತಿ. ಎಂ.ವಿ.ಸೀ. ಬಿ.ಎಂ.ಶ್ರೀ. ಶಿಷ್ಯರು. ಹನೂರರು ಎಂ.ವಿ.ಸೀ. ಅವರ ಶಿಷ್ಯರು. ಹೀಗೆ ಸಾಹಿತ್ಯ, ಸಂಸ್ಕೃತಿಗಳ ಪೋಷಣೆಯಾಗಿ ಈ ಗೌರವ ಪ್ರದಾನದ ಪರಂಪರೆ ಮುಂದುವರಿಯುತ್ತಿದೆ. ಇನ್ನೊಂದೆಡೆ ಕನ್ನಡ ಶಾಲೆಗಳು ಮುಚ್ಚುವ ಮೂಲಕ ತುಂಬಾ ನೋವಾಗುತ್ತಿದೆ. ಮತ್ತೆ ಮತ್ತೆ ಸರ್ಕಾರ ಇಂಗ್ಲಿಷ್ ಶಾಲೆಗಳನ್ನು ತೆರೆಯುವುದಕ್ಕೆ ಬೆಂಬಲ ಕೊಡುತ್ತಿದೆ. ಕನ್ನಡ ಉಳಿಯಬೇಕು, ಅದರ ಸಂವರ್ಧನೆಗೆ ಭದ್ರ ಬುನಾದಿ ಹಾಕಬೇಕು ಎಂದರು. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಎಲ್ಲರನ್ನೂ ಗೌರವದಿಂದ ಸ್ವಾಗತಿಸಿದರು. ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಅವರು ಪ್ರಶಸ್ತಿಪತ್ರವನ್ನು ಓದಿ, ಕೊನೆಯಲ್ಲಿ ವಂದನಾರ್ಪಣೆಯನ್ನು ನಡೆಸಿಕೊಟ್ಟರು. ವಿದುಷಿ ಸುಮಲತಾ ಮಂಜುನಾಥ್ ನಮ್ಮಮ್ಮ ಶಾರದೆ ಕೀರ್ತನೆಯನ್ನು ಹಾಡಿ ಕಾರ್ಯಕ್ರಮವನ್ನು ಶುಭಾರಂಭ ಮಾಡಿದರು. ಕಾರ್ಯಕ್ರಮದ ನಡುವೆ ಎರಡು ಭಾವಗೀತೆಗಳನ್ನು ಹಾಡಿ ಮನಸ್ಸನ್ನು ಸಂತೋಷಪಡಿಸಿದರು. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎನ್.ಆರ್. ಲಲಿತಾಂಬ ಕಾರ್ಯಕ್ರಮ ನಿರೂಪಣೆ ಮಾಡಿದರು.

## ೨೩.೯.೨೦೨೬ ಬುಧವಾರ ಸಂಜೆ ೫.೦೦ ಗಂಟೆ
## ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಕಾರ್ಯಕ್ರಮ

ವಿಷಯ: **ದೊಡ್ಡರಂಗೇಗೌಡರ ಸಿನಿಮಾ ಸಾಹಿತ್ಯ**

ವಿಷಯ ಮಂಡನೆ: **ಡಾ. ಡಿ.ಎಸ್. ಶ್ರೀನಿವಾಸ ಪ್ರಸಾದ್,** ಉಪನ್ಯಾಸಕರು, ಜೈನ್ ಕಾಲೇಜು, ಕೆಜಿಎಫ್

ಮುಖ್ಯ ಅತಿಥಿ: **ಪ್ರೊ. ಪಿ.ಎನ್. ಮೂಡಿತ್ತಾಯ,** ವಿಶ್ರಾಂತ ಪ್ರಾಚಾರ್ಯರು, ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಕಾಸರಗೋಡು

ಉಪಸ್ಥಿತಿ: **ಡಾ. ಡಿ. ಭರತ್,** ಪ್ರಾಧ್ಯಾಪಕರು, ಸಾಹಿತಿಗಳು

ಅಧ್ಯಕ್ಷತೆ: **ಡಾ. ಬೈರಮಂಗಲ ರಾಮೇಗೌಡ**

ಸಹಕಾರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ದೊಡ್ಡರಂಗೇಗೌಡರ ಸಿನಿಮಾ ಸಾಹಿತ್ಯವನ್ನು ಕುರಿತು ಡಾ. ಡಿ.ಎಸ್. ಶ್ರೀನಿವಾಸ ಪ್ರಸಾದ್ ಮಾತನಾಡುತ್ತಾ "ಶಿಷ್ಟ ಭಾಷೆಯ ಮೋಹ, ಸಾಂಸಾರಿಕ ಮತ್ತು ಪ್ರೇಮಗೀತೆಗಳ ವಿಷಯದಲ್ಲಿ ಮಡಿವಂತಿಕೆ ಇದ್ದಾಗ ಸರಳವಾದ ಭಾಷೆಯಲ್ಲಿ ಹಳ್ಳಿ ಸೊಗಡಿನ ಪದಗಳನ್ನು ಬಳಸಿ ಹಾಡುಗಳನ್ನು ದೊಡ್ಡರಂಗೇಗೌಡರು ಬರೆಯುತ್ತಾ ಹೊಸ ಆಂದೋಲನಕ್ಕೆ ಕಾರಣರಾದರು. ಚಿ. ಉದಯಶಂಕರ್, ವಿಜಯನಾರಸಿಂಹರಂತಹ ರಚನೆಕಾರರ ನಡುವೆ ಇವರು ಏರಿದ ಎತ್ತರ ಸ್ಮರಣಾರ್ಹ ಎಂದು ಮಾತನಾಡುತ್ತಾ ದೊಡ್ಡರಂಗೇಗೌಡರ ಅನೇಕ ಹಾಡುಗಳ ತುಣುಕುಗಳನ್ನು ಉದಾಹರಿಸಿದರು. ಅಶ್ಲೀಲತೆ ಬಾರದ ಹಾಗೆ ಎಚ್ಚರವಹಿಸಿದ್ದ ಅಭಿಜಾತ ಕವಿಯೂ ಆದ ಗೌಡರನ್ನು ಮೆಚ್ಚಿಕೊಂಡದ್ದಕ್ಕೆ ಕಾರಣಗಳನ್ನು ಮುಂದಿಡುತ್ತಾ, ಇವರು ವರ್ಣಚಕ್ರ ಸಿನಿಮಾದಲ್ಲಿ ಹಾಡು ಬರೆದಿದ್ದಾರೆ. ಇದಕ್ಕೂ ಮೊದಲು ಗೌಡರು ಅಂತರಜಾತಿ ವಿವಾಹವಾದ ಮಗ ಎಂದು ಅವರ ತಂದೆ ಮನೆಯಿಂದ ಹೊರಗಡೆ ಕಳುಹಿಸಿದ್ದರು. ಆ ಸಂದರ್ಭದಲ್ಲಿ ವರ್ಣಚಕ್ರ ಸಿನಿಮಾಗೆ 'ನೀ ನನ್ನ ತಾಯಿಯಾಗಿ ವಾತ್ಸಲ್ಯ ಸಿರಿ ತೋರಿದೆ' ಎಂದು ಹಾಡು ಬರೆದು ಮನೆಗೆ ಬಂದಾಗ ಸ್ವತಃ ತಾಯಿ ಗಂಡನನ್ನು ಲೆಕ್ಕಿಸದೆ ಮಗನನ್ನು ನೋಡುವ ಆಸೆಯೊಂದಿಗೆ ಇವರಿದ್ದ ಮನೆಗೆ ಬಂದಿರ್ತಾಳೆ. ದೊಡ್ಡರಂಗೇಗೌಡರು ನವ್ಯದಿಂದ ನವೋದಯಕ್ಕೆ ಮತ್ತೆ ಬಂಡಾಯದ ಕಡೆಗೆ ಹೊರಳಿದವರು. ನೂರಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ರಚನೆ ಮಾಡಿದ್ದಾರೆ. ಇವರು ಮರ್ಯಾದೆ ಮಹಲ್ ಸಿನಿಮಾದ ಓಂಕಾರ ಗಣಪತಿಯೇ ಕೋಟಿ ವಂದನೆ ಹಾಡನ್ನು ಬರೆದಿದ್ದಾರೆ. ಮೇಲುನೋಟಕ್ಕೆ ಅದೊಂದು ಭಕ್ತಿಗೀತೆಯಂತೆ ಕಾಣುತ್ತದೆ. ಆದರೆ ಅದನ್ನು ಗಂಭೀರವಾಗಿ ನೋಡಿದರೆ ಸಾಮಾಜಿಕ ವಿಮರ್ಶೆ ಇದೆ. ಎಂದೆಂದೂ ನೀ ಬಾಡದ ಹೂ ಮಲ್ಲಿಗೆ ಹಾಡನ್ನು ಬರೆದಿದ್ದರು. ಆಗ ಚಿ. ಉದಯಶಂಕರ್ ಅವರು ಸಿಕ್ಕಿ 'ಏನ್ರೀ, ನಾವು ಮಲ್ಲಿಗೆ ಹೂ ಎಂದು ಬರೆದರೆ ನೀವು ಬಾಡದ ಹೂ ಎಂದು ಬರೀತೀರಿ, ಅಸಾಧ್ಯರು ನೀವು' ಎಂದಿದ್ದರಂತೆ. ಕೆ.ವಿ. ಮಹಾದೇವನ್ ಸಂಗೀತ ನಿರ್ದೇಶಕರು. ಇವರು ದೊಡ್ಡರಂಗೇಗೌಡರ ಹಾಡುಗಳನ್ನು ಮೆಚ್ಚಿಕೊಂಡಿದ್ದರು. ಮೋಡಿಯ ಮಾಡಿದವಳ ಪರಸಂಗ ಐತೆ ಗೀತೆ ನನ್ನನ್ನು ಕಾಡಿದ ಹಾಡು. ಸಳನ ಕತೆಯನ್ನು ಕಥನ ಪರಂಪರೆಯಲ್ಲಿ ಕೊಟ್ಟವರು ದೊಡ್ಡರಂಗೇಗೌಡರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದವರು. ದೊಡ್ಡರಂಗೇಗೌಡರು ಪ್ರಗಾಥಗಳ ರಚನೆಯಲ್ಲಿ ಏಷ್ಯಾ ಖಂಡದಲ್ಲೇ ದಾಖಲೆಯನ್ನು ಮಾಡಿದ್ದಾರೆ ಎಂದು ದೊಡ್ಡರಂಗೇಗೌಡರ ಸುಂದರವಾದ ಗೀತೆಗಳ ಸಾಲುಗಳನ್ನು ಉದಾಹರಿಸುತ್ತಾ ಸೊಗಸಾಗಿ ಪರಿಚಯಿಸಿದರು.

ಪ್ರೊ.ಮೂಡಿತ್ತಾಯ ಅವರು ಮಾತನಾಡುತ್ತಾ ೫೦–೬೦ ವರ್ಷಗಳ ಹಿಂದೆ ರಾಜ್ಯಮಟ್ಟದ ಕವನ ಸ್ಪರ್ಧೆಗಳಲ್ಲಿ ದೊಡ್ಡರಂಗೇಗೌಡರು, ನಾನು ಸ್ಪರ್ಧಿಗಳಾಗಿದ್ದೆವು. ಸಾಹಿತ್ಯದಲ್ಲಿ ಮೊದಲು ಮಹಾಕಾವ್ಯಗಳು ಬಂದವು, ನಂತರದಲ್ಲಿ ವಚನ ಸಾಹಿತ್ಯ, ಕೀರ್ತನ ಸಾಹಿತ್ಯ, ಈಗ ಸಿನಿಮಾ ಸಾಹಿತ್ಯ ಬಂತು. ಲಲಿತ ಕಲೆಗಳು ಎಲ್ಲವೂ ಒಟ್ಟುಗೂಡಿದ ಸಾಹಿತ್ಯ ರಂಗಸಾಹಿತ್ಯ ಎಂದು ಮಾತನಾಡುತ್ತಾ ೧೯೭೧ ರಲ್ಲಿ ತಾವು ನೋಡಿದ ಸಿನಿಮಾಗಳ ಕೆಲವು ದೃಶ್ಯಗಳನ್ನು ನೆನಪು ಮಾಡಿಕೊಂಡರು.

ದೊಡ್ಡರಂಗೇಗೌಡರ ಮಗ ಡಾ. ಡಿ. ಭರತ್ ಮಾತನಾಡುತ್ತಾ, ತಂದೆಯವರ ಮೇಲೆ ಸುಮಾರು ಹತ್ತರಷ್ಟು ಅಭಿನಂದನಾ ಗ್ರಂಥಗಳು ಸಮರ್ಪಣೆಯಾಗಿದೆ. ನನ್ನ ತಂದೆಯ ಸಾಧನೆಯ ಬಗ್ಗೆ ನನಗೆ ತುಂಬಾ ಹೆಮ್ಮೆಯಿದೆ. ನಾನೊಂದು ತೀರ ನೀನೊಂದು ತೀರ ಹಾಡಿಗೆ ಉತ್ತಮ ಚಿತ್ರಸಾಹಿತಿ ಪ್ರಶಸ್ತಿಯನ್ನು ಪಡೆದರು. ಅಶ್ವಮೇಧ ಸಿನಿಮಾದ ಹಾಡಿಗೆ ಡಾ. ರಾಜಕುಮಾರ್ ಅವರು ಹಾಡಿದ್ದಾರೆ. ನಮ್ಮ ತಂದೆಯವರು ಅತ್ಯುತ್ತಮ ಹಾಡುಗಳನ್ನು, ಪರಿಶುದ್ಧವಾದ ಹಾಡುಗಳನ್ನು ಕೊಟ್ಟಿದ್ದಾರೆಂದು ಮೆಚ್ಚಿ ಮಾತನಾಡಿದರು.

ಸಭೆಯಲ್ಲಿದ್ದ ಡಾ.ದೊಡ್ಡರಂಗೇಗೌಡರು "ಶರಣೆಂಬೆ ಸಾಹಿತ್ಯ






ಸಂಗೀತ ಸರಸ್ವತಿಗೆ ಶರಣೆಂಬೆ" ಎಂಬ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿ 'ಪರಸಂಗದ ಗೆಂಡೆತಿಮ್ಮ' ಸಿನಿಮಾ ಹಾಡನ್ನು, ನಮ್ಮೂರ ಮಂದಾರ ಹೂವೇ ಹಾಡನ್ನು ನೆನಪಿಸಿಕೊಂಡರು. ಸತ್ಯಜಿತ್ರಾಯ್ ಅವರು ರಾಷ್ಟ್ರಮಟ್ಟದ ಶ್ರೇಷ್ಠ ನಿರ್ದೇಶಕರೆಂದು ಗುರುತಿಸಲ್ಪಟ್ಟವರು. ಅವರಂತೆ ಯಾವುದಕ್ಕೂ ಕಡಿಮೆ ಇಲ್ಲದವರು ನಮ್ಮ ಪುಟ್ಟಣ್ಣ ಕಣಗಾಲ್. ಬಿ.ಆರ್. ಪಂತುಲು ಅವರ ಬಳಿ ಐವತ್ತು ವರ್ಷ ಕೆಲಸ ಮಾಡಿದ್ದಾರೆ. ಕನ್ನಡಕ್ಕೆ ಒಂದು ಅಭಿರುಚಿಯನ್ನು ತಂದವರು ಪುಟ್ಟಣ್ಣ ಕಣಗಾಲ್ ಅವರು. ಚಿತ್ರಸಾಹಿತಿಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಅವರಲ್ಲಿರುವ ಪ್ರತಿಭೆಯನ್ನು ಬೆಳೆಸುವ ಗುಣ ಅವರಲ್ಲಿತ್ತು. ಇವತ್ತಿನ ಕೆಲವು ನಿರ್ಮಾಪಕರು ಹಣ ಗಳಿಸುವ ಆಸೆಯಿಂದ ಅಶ್ಲೀಲ ಸಾಹಿತ್ಯವನ್ನು ಬರೆಸಿ ಕನ್ನಡ ಸಿನಿಮಾ ಮಟ್ಟವನ್ನು ಕೆಳಗಿಳಿಸಿದ್ದಾರೆ. ಹೊಸ ಅಭಿರುಚಿಯುಳ್ಳ ಯುವ ನಿರ್ದೇಶಕರು, ಚಿತ್ರಸಾಹಿತಿಗಳು ಬರಬೇಕು. ಹೆಚ್ಚಿನ ಅಭಿರುಚಿಯುಳ್ಳ ಪ್ರೇಕ್ಷಕರು ಇದ್ದಾರೆಂದರೆ ಅದು ಸಿನಿಮಾಗೆ ಮಾತ್ರ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷ ಭಾಷಣದಲ್ಲಿ ಡಾ.ಬೈರಮಂಗಲ ರಾಮೇಗೌಡರು ಮಾತನಾಡುತ್ತಾ ಇತ್ತೀಚಿಗೆ ಡಾ.ದೊಡ್ಡರಂಗೇಗೌಡರಿಗೆ ಬೆಂಗಳೂರು ವಕೀಲರ ಸಾಹಿತ್ಯ ಕೂಟ ವಿಶೇಷ ಸನ್ಮಾನ ಕಾರ್ಯಕ್ರಮವೊಂದನ್ನು ಏರ್ಪಡಿಸಿತ್ತು. ವಕೀಲ ಬಂಧುಗಳು ಕಿಕ್ಕಿರಿದು ನೆರೆದಿದ್ದರು. ಆ ಕಾರ್ಯಕ್ರಮ ತುಂಬಾ ಸೊಗಸಾಗಿತ್ತು. ಆ ಸೊಗಸಿಗೆ ಕಾರಣ ಅಲ್ಲಿದ್ದ ವಕೀಲರೆಲ್ಲರೂ ದೊಡ್ಡರಂಗೇಗೌಡರ ಬಹು ದೊಡ್ಡ ಅಭಿಮಾನಿಗಳಾಗಿದ್ದರು. ತಮ್ಮ ಮಂಡಿನೋವಿನ ಸ್ಥಿತಿಯಲ್ಲೂ ಗೌಡರಿಗೆ ಜನರ ನಡುವೆ ಇರಬೇಕೆಂಬ ತುಡಿತ. ಕನ್ನಡ ಭಾಷೆಯ ಸೇವೆ ಮಾಡುವ ಎಲ್ಲರೂ ಅಧ್ಯಾಪಕರಾಗಿರುವ ಕುಟುಂಬ ಇವರದು. ರಾಜೇಶ್ವರಿಯವರು ೧೯೮೫–೯೦ರಲ್ಲಿ ಪ್ರಜಾವಾಣಿ ಸಾಪ್ತಾಹಿಕದಲ್ಲಿ ಪುಸ್ತಕ ವಿಮರ್ಶೆ ಮಾಡುತ್ತಿದ್ದರು ಎಂದು ನೆನಪಿಸಿಕೊಂಡರು. ದೊಡ್ಡರಂಗೇಗೌಡರ ಸಿನಿಮಾ ಸಾಹಿತ್ಯವನ್ನು ಕುರಿತು ಡಾ. ಶ್ರೀನಿವಾಸ ಪ್ರಸಾದ್ ಅವರು ಎಷ್ಟು ಸುಲಲಿತವಾಗಿ, ಸಹಜವಾಗಿ ಮಾತನಾಡಿದರೆಂದು ಶ್ಲಾಘಿಸಿದರು.

ಕಾರ್ಯಕ್ರಮದ ಆರಂಭಕ್ಕೆ ಗಣ್ಯರು ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಿದರು. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಗಣ್ಯರನ್ನು ಸಭೆಗೆ ಪರಿಚಯಿಸಿ ಎಲ್ಲರನ್ನು ಸ್ವಾಗತಿಸಿದರು.

## ೨೬.೯.೨೦೨೬ ಶನಿವಾರ ಬೆಳಗ್ಗೆ ೧೦.೩೦
## ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ
## ಪ್ರೊ. ಜಿ.ಎಚ್. ನಾಯಕ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ

ಪ್ರಶಸ್ತಿ ಪ್ರದಾನ: **ಶ್ರೀ ಕೆ. ಮೋಹನ್‌ದೇವ್ ಆಳ್ವ**, ಧರ್ಮದರ್ಶಿಗಳು, ಗಾಯನ ಸಮಾಜ, ಗೌರವ ಅಧ್ಯಕ್ಷರು, ಅಖಿಲ ಕರ್ನಾಟಕ ಮಕ್ಕಳ ಕೂಟ

ಪ್ರಶಸ್ತಿ ಪಡೆದವರು : **ಪ್ರೊ. ಜಿ. ಅಬ್ದುಲ್ ಬಷೀರ್**, ಸಾಹಿತಿಗಳು, ನಿವೃತ್ತ ಪ್ರಾಧ್ಯಾಪಕರು

ಮುಖ್ಯ ಅತಿಥಿ: **ವಿದ್ವಾನ್ ವೆಂಕಟೇಶ್ ಶರ್ಮ**, ಸಂಗೀತ ವಿದ್ವಾಂಸರು

ಅಧ್ಯಕ್ಷತೆ: **ಡಾ. ಬೈರಮಂಗಲ ರಾಮೇಗೌಡ**

ಸಹಕಾರ: **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಪ್ರೊ. ಜಿ.ಎಚ್. ನಾಯಕ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನಿರಿಸಿ, ಪ್ರಶಸ್ತಿ ಪ್ರದಾನ ಮಾಡುವ ಉತ್ಸಾಹದಲ್ಲಿ ಮೋಹನ್‌ದೇವ್ ಆಳ್ವ ಅವರು ಮಾತನಾಡುತ್ತಾ "ಎಂದೆಂದೂ ಮರೆಯಲಾಗದ ಶುಭ ಸಮಾರಂಭದಲ್ಲಿ ನಾವೆಲ್ಲರೂ ಸೇರಿದ್ದೇವೆ. ಇದೊಂದು ಪ್ರಶಸ್ತಿ ಪ್ರದಾನ ಸಮಾರಂಭ. ಇದನ್ನು ಸ್ವೀಕರಿಸುವವರು ಪ್ರೊ. ಅಬ್ದುಲ್ ಬಷೀರ್. ಅವರು ಪ್ರಶಸ್ತಿ ಸ್ವೀಕರಿಸುತ್ತಾರಲ್ಲ ಅದು ನನಗೆ ಅತ್ಯಂತ ಸಂತೋಷದ ವಿಷಯ. ಎ.ಪಿ.ಎಸ್. ಕಾಲೇಜಿನ ಅನಂತಾಚಾರ್, ನರ್ಮದಾಬಾಯಿಯವರು ಅಬ್ದುಲ್ ಬಷೀರ್ ಅವರನ್ನು ಮಗನಂತೆ ಕಂಡವರು. ಅವರು ಯೋಗ್ಯತೆಗೆ, ಕಾರ್ಯಕ್ಷಮತೆಗೆ ಮಹತ್ವವನ್ನು ಕೊಟ್ಟವರು. ಪ್ರತಿಷ್ಠಾನದ ಕಾರ್ಯಕ್ರಮಗಳನ್ನು ಪ್ರತಿಷ್ಠಾನದ ಅಧ್ಯಕ್ಷರಾದಿಯಾಗಿ ಎಲ್ಲರೂ ಅತ್ಯಂತ





ಶ್ರಮವಹಿಸಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ನನ್ನ ಆರೋಗ್ಯ ಎಷ್ಟೋ ಸುಧಾರಿಸಿದೆ” ಎಂದು ಸಂತೋಷಪಟ್ಟರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿದ್ವಾನ್ ವೆಂಕಟೇಶ್ ಶರ್ಮ ಅವರು ಮಾತನಾಡುತ್ತಾ ಇದೊಂದು ಸಾಹಿತ್ಯ ಸಂಗೀತ ಸಂಗಮ. ಚಿಕ್ಕವಯಸ್ಸಿನಲ್ಲಿ ಕೆಲವು ಷಟ್ಪದಿಗಳನ್ನು, ಭಾವಗೀತೆಗಳನ್ನು ರಚನೆ ಮಾಡಿದ್ದೆ. ನಂತರದಲ್ಲಿ ಪೂರ್ಣ ಪ್ರಮಾಣದಲ್ಲಿ ಸಂಗೀತದಲ್ಲಿಯೇ ಸಾಧನೆ ಮಾಡುವ ಕಾಯಕದಲ್ಲಿ ನಿರತನಾದೆ ಎಂದು ತಮ್ಮ ಮಾತುಗಳನ್ನು ಹಂಚಿಕೊಂಡರು.

ಪ್ರೊ. ಜಿ.ಎಚ್. ನಾಯಕ ಸಾಹಿತ್ಯ ಪ್ರಶಸ್ತಿಗೆ ಪಾತ್ರರಾದ ಪ್ರೊ. ಜಿ. ಅಬ್ದುಲ್ ಬಷೀರ್ ಅವರು ಮಾತನಾಡುತ್ತಾ ನಮ್ಮ ಮೋಹನ್‌ದೇವ್ ಆಳ್ವ ಅವರು ಎ.ಪಿ.ಎಸ್. ಕಾಲೇಜಿನಲ್ಲಿ ಆಡಳಿತ ಮಂಡಳಿ ಸದಸ್ಯರಾಗಿ, ಅಧ್ಯಕ್ಷರಾಗಿ ತುಂಬಾ ಶ್ರಮಪಟ್ಟಿದ್ದಾರೆ. ನನ್ನ ಬಗ್ಗೆ ಪ್ರೀತಿಯ ಮಾತುಗಳನ್ನಾಡಿದ್ದಾರೆ. ನನ್ನ ಗುರುಗಳು ಚಂದ್ರಶೇಖರ್ ಕಂಬಾರರು. ಇವರ ಆಶೀರ್ವಾದದೊಂದಿಗೆ ನನ್ನ ಬರವಣಿಗೆ ತೆರೆದುಕೊಂಡದ್ದು. ೧೯೭೩ ರಲ್ಲಿ ನನ್ನ ಬರವಣಿಗೆ ಪ್ರಾರಂಭಗೊಂಡಿತು. ಮೋಹನ್‌ದೇವ್ ಆಳ್ವ ಅವರ ಆಶೀರ್ವಾದದೊಂದಿಗೆ ಇವತ್ತಿನ ಪ್ರಶಸ್ತಿಯನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿದ್ದೇನೆ. ಪ್ರೊ. ಜಿ.ಎಚ್. ನಾಯಕ ಅವರ ಹೆಸರಿನಲ್ಲಿ ಪ್ರಶಸ್ತಿ ಲಭಿಸಿರುವುದು ನನ್ನ ಅದೃಷ್ಟವೇ ಸರಿ. ಇವರನ್ನು ಸೆಂಟ್ರಲ್ ಕಾಲೇಜಿನಲ್ಲಿ ಜಿ.ಎಸ್. ಶಿವರುದ್ರಪ್ಪನವರು ಆಯೋಜನೆ ಮಾಡಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ಮಾಡಲು ಬಂದಾಗ ಮೊದಲು ಕಂಡಿದ್ದೆ. ಸಾಹಿತ್ಯ ವಿಮರ್ಶೆ ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ಬಹಳ ಅಪರೂಪದ್ದು ಎಂದು ಎಲ್ಲರನ್ನೂ ಸ್ಮರಿಸಿಕೊಂಡು ತಮ್ಮ ಮನದ ಮಾತುಗಳನ್ನು ಹಂಚಿಕೊಂಡರು.

ಡಾ. ಬೈರಮಂಗಲ ರಾಮೇಗೌಡರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಆಯ್ಕೆ ಸಮಿತಿ ಈ ವರ್ಷದ ಪ್ರೊ. ಜಿ.ಎಚ್. ನಾಯಕ ಸಾಹಿತ್ಯ ಪ್ರಶಸ್ತಿಗೆ ಪ್ರೊ. ಜಿ. ಅಬ್ದುಲ್ ಬಷೀರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದಾಗ ಕೂಡಲೇ ಮೋಹನ್‌ದೇವ್ ಆಳ್ವ ಅವರಲ್ಲಿ ಹಂಚಿಕೊಂಡೆವು. ಆಗ ಅವರು ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು. ಕಾರಣ, ಅಬ್ದುಲ್ ಬಷೀರ್ ಅವರನ್ನು ಎ.ಪಿ.ಎಸ್. ಕಾಲೇಜಿನಲ್ಲಿದ್ದಾಗಿಂದಲೂ ಬಲ್ಲೆ. ಅವರ ಸಾಹಿತ್ಯಾಸಕ್ತಿ, ಬರವಣಿಗೆ, ವ್ಯಕ್ತಿತ್ವ ಎಲ್ಲವನ್ನೂ ತುಂಬಾ ಗೌರವಿಸುತ್ತಾ ಬಂದಿದ್ದೇನೆ. ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತೋಷವನ್ನುಂಟುಮಾಡಿದೆ ಎಂದು ತಮ್ಮ ಸಂತಸವನ್ನು ವ್ಯಕ್ತಪಡಿಸಿದರು ಎಂದು ತಿಳಿಸಿದರು.

ವಿದ್ವಾನ್ ವೆಂಕಟೇಶ್ ಶರ್ಮ ಹಾಗೂ ತಂಡದವರಿಂದ ಸುಮಧುರವಾದ ಶಾಸ್ತ್ರೀಯ, ಭಾವಗೀತೆ ಸಂಗೀತ ಕಾರ್ಯಕ್ರಮ ಜರುಗಿತು. ತಬಲದಲ್ಲಿ ಹಿಂದೂಸ್ತಾನಿ ತಬಲ ವಾದಕರು, ಹಿರಿಯ ಶ್ರೇಣಿ ಆಕಾಶವಾಣಿ ಕಲಾವಿದರಾದ ಕೌಶಿಕ್ ಭಟ್, ಹಾರ್ಮೋನಿಯಂನಲ್ಲಿ ಆಕಾಶವಾಣಿ ಕಲಾವಿದೆ ಗೀತಾ ಅವರು ಸಹಕರಿಸಿದರು.

ಕಾರ್ಯಕ್ರಮ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಗಣ್ಯರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ಕೋಶಾಧಿಕಾರಿ ಚಂದ್ರಶೇಖರ್ ನಾದೂರು ಕಾರ್ಯಕ್ರಮವನ್ನು ನಿರ್ವಹಿಸಿದರು.

## ಬಿ.ಎಂ.ಶ್ರೀ. ಪ್ರತಿಷ್ಠಾನದ ಸಿಬ್ಬಂದಿ ವರ್ಗದವರ ಪ್ರವಾಸ ಕಾರ್ಯಕ್ರಮ

ದಿನಾಂಕ ೩೧.೦೮.೨೦೨೬ ರಂದು ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ರಜಾ ಘೋಷಿಸಿದ ಪ್ರಯುಕ್ತ, ಕಚೇರಿಯ ಮೂವರು ಸಿಬ್ಬಂದಿ ವರ್ಗದವರು ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಬಿ.ಎಸ್. ಗುರುಪ್ರಸಾದ್ ಅವರ ನೇತೃತ್ವದಲ್ಲಿ ಕೋಲಾರ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಗೊಂಡಿದ್ದರು. ಪ್ರತಿಷ್ಠಾನವೇ ಅವರ ಪ್ರವಾಸವನ್ನು ಪ್ರಾಯೋಜಿಸಿತ್ತು.

ಖಾಸಗಿ ವಾಹನದ ವ್ಯವಸ್ಥೆಯಲ್ಲಿ, ಕೆಳಕಂಡ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿದರು.

೧. ಅಂತರಗಂಗೆ ಮತ್ತು ಕಾಶಿವಿಶ್ವೇಶ್ವರ ದೇವಸ್ಥಾನ
೨. ಸೋಮೇಶ್ವರ ದೇವಸ್ಥಾನ
೩. ಮುಳಬಾಗಿಲು ಆಂಜನೇಯಸ್ವಾಮಿ ದೇವಸ್ಥಾನ
೪. ನರಸಿಂಹತೀರ್ಥ
೫. ಶ್ರೀಪಾದರಾಜರ ಬೃಂದಾವನ ಮತ್ತು ಮಠ
೬. ಕೋಟಿಲಿಂಗ ಕ್ಷೇತ್ರ
೭. ಬಂಗಾರು ತಿರುಪತಿ, ಪದ್ಮಾವತಿ ಕ್ಷೇತ್ರ

ಅದೇ ದಿನ ರಾತ್ರಿ ೮.೩೦ ಗಂಟೆಗೆ ಬೆಂಗಳೂರಿಗೆ ಹಿಂದಿರುಗಿದರು.

## ಹಸ್ತಪ್ರತಿ ವಿಭಾಗ

ಪ್ರತಿಷ್ಠಾನದ ಸದಸ್ಯರಾದ ಶ್ರೀ ಜಯರಾಮ್ ಶ್ರೀನಿವಾಸ ಅವರು ಪ್ರತಿಷ್ಠಾನದ ಹಸ್ತಪ್ರತಿ ಸಂಗ್ರಹಾಲಯಕ್ಕೆ ನಂದಿನಾಗರಿ ಲಿಪಿಯ ವಿವಿಧ ಶಾಂತಿ ಆಚರಣೆಯ ಮಂತ್ರ ಸಂಗ್ರಹ ತಾಡವೋಲೆ ಗ್ರಂಥವೊಂದನ್ನು ದಾನವಾಗಿ ನೀಡಿರುತ್ತಾರೆ. 109 ಪತ್ರಗಳ ಈ ಹೊತ್ತಿಗೆಯನ್ನು ಸಂರಕ್ಷಿಸಿ, ಡಿಜಿಟಲೀಕರಣಗೊಳಿಸಲಾಗಿದೆ.

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 30-09-2026

# ಪ್ರಸ್ತುತ ತಿಂಗಳ ಅಂಗಳ

## ಕಾರ್ಯಕ್ರಮಗಳು

(ಅನಿವಾರ್ಯ ಸಂದರ್ಭಗಳಲ್ಲಿ ಕೆಳಕಾಣಿಸಿದ
ಯಾವುದೇ ಕಾರ್ಯಕ್ರಮದ ದಿನಾಂಕ ಬದಲಾಗಬಹುದು)

**೦೭.೧೦.೨೦೨೬ ಬುಧವಾರ ಸಂಜೆ ೫.೦೦ ಗಂಟೆಗೆ**
ಬೇಟೆರಾಯ ದೀಕ್ಷಿತ್, ಬಿ.ರಾಮಸ್ವಾಮಿ ದತ್ತಿ,
ಎಸ್.ಶ್ರೀಕಂಠಯ್ಯ, ಎಚ್.ವಿ.ಸಾವಿತ್ರಮ್ಮ ರಾಮಸ್ವಾಮಿ ದತ್ತಿ
ವಿಷಯ : ದಾಸಸಾಹಿತ್ಯಕ್ಕೆ ವಿಜಯದಾಸರ ಕೊಡುಗೆ
ವಿಚಾರ ಮಂಡನೆ : ಪ್ರೊ.ಎಸ್.ಎಸ್. ರಮೇಶ್
ನಿವೃತ್ತ ಕನ್ನಡ ಉಪನ್ಯಾಸಕರು, ಶ್ರೀ ರಾಮಕೃಷ್ಣ ವಿದ್ಯಾಲಯ, ಮೈಸೂರು

**೧೪.೧೦.೨೦೨೬ ಬುಧವಾರ ಸಂಜೆ ೫.೦೦ ಗಂಟೆಗೆ**
ಎಂ.ಎ. ರಾಮಾನುಜಯ್ಯಂಗಾರ್ ದತ್ತಿ
ವಿಷಯ : ಶ್ರೀಕೃಷ್ಣ ಆಲನಹಳ್ಳಿ ಅವರ ಕಾವ್ಯ
ವಿಚಾರ ಮಂಡನೆ : ಡಾ. ಎಚ್.ಕೆ. ಮಳಲಿಗೌಡ
ಕವಿ, ನಿವೃತ್ತ ಕನ್ನಡ ಪ್ರಾಧ್ಯಾಪಕರು

**೧೫.೧೦.೨೦೨೬ ಗುರುವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ಸುಶೀಲಾ ವಾಸುದೇವರಾವ್ ಮತ್ತು
ಹಳದೀಪುರ ವಾಸುದೇವರಾವ್ ದತ್ತಿ
ವಿಷಯ : ಚಿದಾನಂದ ಅವಧೂತರ 'ಜ್ಞಾನಸಿಂಧು'
ವಿಚಾರ ಮಂಡನೆ : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಬಹುಶ್ರುತ ವಿದ್ವಾಂಸರು, ವಿಶ್ರಾಂತ ಕುಲಪತಿಗಳು

**೧೬.೧೦.೨೦೨೬ ಶುಕ್ರವಾರ ಸಂಜೆ ４.೦೦ ಗಂಟೆಗೆ**
ಹೆಬ್ಬಗೋಡಿ ಗುಂಡಪ್ಪ ಜಾನಕಮ್ಮ ಸರಸ್ವತೀ ಪೂಜಾ ದತ್ತಿ
ಸರಸ್ವತೀ ಪೂಜೆ

**೧೬.೧೦.೨೦೨೬ ಶುಕ್ರವಾರ ಸಂಜೆ ೫.೦೦ ಗಂಟೆಗೆ**
ಹಳಗನ್ನಡ ರಸಗ್ರಹಣ ತರಗತಿಗಳ
ಉದ್ಘಾಟನಾ ಕಾರ್ಯಕ್ರಮ

**೨೫.೧೦.೨೦೨೬ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಮತ್ತು
ಶಾ. ಬಾಲುರಾವ್ ಯುವಬರಹಗಾರ ಪ್ರಶಸ್ತಿ ಪ್ರದಾನ

**೩೧.೧೦.೨೦೨೬ ಶನಿವಾರ ಬೆಳಗ್ಗೆ ೧೦.೩೦ ಗಂಟೆಗೆ**
ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಶೈಲಜಾ ಆಳ್ವ
ಅವರು ಸ್ಥಾಪಿಸಿರುವ ರಾಷ್ಟ್ರಕವಿ ಶ್ರೀ ಮಂಜೇಶ್ವರ ಗೋವಿಂದ
ಪೈ ದತ್ತಿ, ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ದತ್ತಿ,
ರೆವರೆಂಡ್ ಶ್ರೀ ಚೆನ್ನಪ್ಪ ದಾನಿ ಯೆಲ್ಲಪ್ಪ ಉತ್ತಂಗಿ ದತ್ತಿ,
ಶ್ರೀ ಕೃಷ್ಣಮೂರ್ತಿ ಪುರಾಣಿಕ ದತ್ತಿ
೧೦ ರಿಂದ ೧೬ರ ವಯೋಮಾನದ ವಿದ್ಯಾರ್ಥಿಗಳಿಗೆ ಮತ್ತು ಪದವಿ
ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಕವನ ವಾಚನ ಸ್ಪರ್ಧೆ

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004. Editor : **Dr. S.L. Manjunath**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೪೧೨೧೨೭